

# ಕಡಲ ಕಲಾವಿದನೂ

**ಚಿತ್ರಪಟ ಕಥನ**

**ಬಾನನ್ನೂ ಒಂದಾಗಿಸಿಕೊಂಡ ನೀಲ ನೀರಿನ ಅಂಚು, ಭೋರ್ಗರೆಯುತ್ತಾ ಅಪ್ಪಳಿಸುವ ಆಲೆಗಳು, ತೀರದುದ್ದಕ್ಕೂ ಮೈಚಾಚಿಕೊಂಡ ಮರಳ ರಾಶಿ... ಕಣ್ಣಿನ ಅಂದಾಜಿಗೆ ನಿಲುಕುವ ಕಡಲ ಸೌಂದರ್ಯದ ಆಚೆಗೂ ಸಮುದ್ರವೇ ಸೃಷ್ಟಿಸುವ ಹಲವು ಸುಂದರ ಕಲಾಕೃತಿಗಳಿವೆ.**

**■ ಲೋಕೇಶ್ ಮೊಸಳೆ**

ಅದೊಂದು ದಿನ ಸಮುದ್ರ ತಟದಲ್ಲಿ ಅಲೆಗಳ ಆರ್ಭಟವನ್ನು ನೋಡುತ್ತಾ ಕುಳಿತಿದ್ದೆ. ದೂರದೆಲ್ಲಿಂದಲೋ ಬರುತ್ತಿದ್ದ ಭೋರ್ಗರೆವ ಅಲೆಗಳು ನನ್ನ ಕಣ್ಣೆದುರೇ ಹಾಗೆ ಬಂದು ಹೀಗೆ ತಣ್ಣಗಾಗಿ ಮರಳುತ್ತಿದ್ದವು.

ಯಾಕೆ ಹೀಗೆ...?

ಇವು ಯಾಕೆ ಹೀಗೆ!?

ಆರ್ಭಟಿಸುವ ಕಡಲು ಹೀಗೇಕೆ ದಡ ಸೇರುವಲ್ಲಿ ಮೌನವಾಗುತ್ತಿದೆ?

ಕಣ್ನೋಟಕ್ಕೆ ಸಿಗದ ಕಡಲಿನ ಆಳ ಅಗಲದೊಳಗೆ ಒಬ್ಬ 'ಕಾಣದ ಕಲಾವಿದ' ಇರುವುದರಿಂದ ಅವನು ದಡ ಸೇರುವಲ್ಲಿ ಮೌನಿಯಾಗಿ ಬಿಡುತ್ತಿದ್ದಾನೆಯೇ?

ಅಬ್ಬರ, ಆರ್ಭಟದೊಂದಿಗೆ ಮೆರೆಯುತ್ತಾ ತನ್ನಿಡೀ ದಂಡಿನೊಂದಿಗೆ ದಂಡೆತ್ತಿ ಬರುತ್ತಿದ್ದ ವೀರ ಸಾಹಸಿ, ಮರಳ ಹಾಸನು ಕಂಡು ತಣ್ಣಗೆ ಮೌನಿಯಾಗಿ ಕಡಲ ತಡಿಯಲ್ಲಿ ಚಿತ್ತಾರ ಮೂಡಿಸಿ ಮತ್ತವನು ತಣ್ಣಗೆ ಹಿಂದಿರುಗುವ ಪರಿಯೇ ಬಲು ಹಿತಕರ.

ಕಡಲ ಒಡಲೊಳಗೆ ಸಲಹುವ ಜೀವರಾಶಿಗಳನ್ನು ಮರಳ ದಂಡೆಗೆ ಆಟವಾಡಲು ತಂದು ಬಿಟ್ಟು, ಮತ್ತೆ ಮತ್ತೆ ಒಡಲಿಗೆ ಸೇರಿಸಿಕೊಳ್ಳುತ್ತಾ ಸಲಹುತ್ತಾನೆ. ನೆಲೆ ಮೂಲ ಎಲ್ಲಿಯದೆಂಬ ಪರಿವೇ ಕಾಣದ ಜೀವಿಗಳೂ ಕಲಾತ್ಮಕ ಚಿತ್ತಾರ ಮೂಡಿಸುವ ಸಂಗತಿಗಳು ಅಚ್ಚರಿ ಹುಟ್ಟಿಸುತ್ತವೆ.

ಇಲ್ಲಿನ ಕಪ್ಪೆಚಿಪ್ಪು ಹುಳಗಳು, ಥರಾವರಿ ಏಡಿಗಳು, ಇವುಗಳನ್ನು ಹುಡುಕಿಕೊಂಡು ಬಂದ ಪಕ್ಷಿಲೋಕದ ಹೆಜ್ಜೆ ಗುರುತುಗಳೇ ಕಡಲ ತೀರದಲ್ಲಿ ತಾತ್ಕಾಲಿಕ ಕಲಾಸೊಬಗನ್ನು ಸೃಷ್ಟಿಸಿಬಿಡುತ್ತವೆ.





